MARCH 19, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

- ಯುನೆಸ್ಕೋ ವಿಶ್ವ ಪಾರಂಪರಿಕ ತಾಣಗಳ ತಾತ್ಕಾಲಿಕ ಪಟ್ಟಿಗೆ, ಅಶೋಕ ಚಕ್ರವರ್ತಿಯ, ರಾಜ್ಯದ ಶಿಲಾ ಶಾಸನಗಳು, ಸೇರ್ಪಡೆ.
- ರಾಜ್ಯಾದ್ಯಂತ ಎಸ್.ಎಸ್.ಎಲ್.ಸಿ. ಪರೀಕ್ಷೆ –1, ನಾಡಿದ್ದು 21 ರಿಂದ ಆರಂಭ, ಏಪ್ರಿಲ್ 4ಕ್ಕೆ ಮುಕ್ತಾಯ.
- ರೈತರ ಹಿತಕಾಯಲು, ಬೆಂಗಳೂರಿನಲ್ಲಿ, 21 ರಂದು, ರಾಜ್ಯ ನೀರಾವರಿ ಸಲಹಾ ಸಮಿತಿಯ, ತುರ್ತು ಸಭೆ.
- ನರೇಗಾ ಮತ್ತು ಕಾಡಾ ಸಹಯೋಗ; ಸವುಳು ಜವುಳು ತಡೆಗೆ, ರಾಜ್ಯದ 10 ತಾಲೂಕುಗಳ ಮುಂಚೂಣಿ ಕಾಡಾ ಸಂಘಗಳಿಗೆ, ಅನುದಾನ.

<><><>

<u>ಈಗ ವಾರ್ತೆಗಳ ವಿವರ</u>

<><><>

ಭಾರತದ 6 ಮಹತ್ವದ ಐತಿಹಾಸಿಕ ಸ್ಥಳಗಳು ಹಾಗೂ ಹೆಗ್ಗುರುತುಗಳು ಯುನೆಸ್ಕೋದ ವಿಶ್ವ ಪಾರಂಪರಿಕ ತಾಣಗಳ ತಾತ್ಕಾಲಿಕ ಪಟ್ಟಿಗೆ, ಸೇರ್ಪಡೆಗೊಂಡಿವೆ. ಇತ್ತೀಚೆಗೆ ಚಕ್ರವರ್ತಿ ಅಶೋಕನ ಶಿಲಾ ಶಾಸನಗಳು ಈ ಮಹತ್ವದ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಉತ್ತರ ಕರ್ನಾಟಕ ಭಾಗದಲ್ಲೂ ಲಭ್ಯವಿರುವ, ಮಹತ್ವದ ಶಿಲಾ ಶಾಸನಗಳ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹಿರಿಯ ಇತಿಹಾಸ ಸಂಶೋಧಕ ಪ್ರೊಫೆಸರ್ ಅಶೋಕ ಶೆಟ್ಟರ್.

<><><>

ಪ್ರೊ. ಅಶೋಕ ಶೆಟ್ಟರ್ ಧ್ವನಿ 50 ಸೆಕೆಂದುಗಳು

<><><>

ನಾಡಿದ್ದು 21 ರಿಂದ ಏಪ್ರಿಲ್ 4ರ ವರೆಗೆ, ರಾಜ್ಯಾದ್ಯಂತ ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ನಡೆಯಲಿವೆ. ನಿಗದಿತ ದಿನದಂದು ಪರೀಕ್ಷೆಗಳು, ಬೆಳಗ್ಗೆ 10 ರಿಂದ ಮಧ್ಯಾಹ್ನ 1:15ರ ವರೆಗೆ ನಡೆಯಲಿವೆ.

<><><>

ಪರೀಕ್ಷೆಗೆ ಸಂಬಂಧಿಸಿದ ಒತ್ತಡಗಳಿದ್ದರೆ ವಿದ್ಯಾರ್ಥಿ ಅಥವಾ ಪಾಲಕರು, ಶುಲ್ಕ ರಹಿತ ದೂರವಾಣಿ ಸಂಖ್ಯೆ 1–4–4–1–6 'ಟೆಲಿ ಮನಸ್'ಗೆ ಕರೆ ಮಾಡಿ, ಪರಿಹಾರ ಕಂಡುಕೊಳ್ಳಬಹುದು.

<><><>

ಪರೀಕ್ಷೆಗಳ ಲೈವ್ ವೆಬ್ ಸ್ಟ್ರೀಮಿಂಗ್‌ಗಾಗಿ, ಎಲ್ಲ ಜಿಲ್ಲಾ ಪಂಚಾಯ್ತಿಗಳಲ್ಲಿ, ವೆಬ್ ಕಾಸ್ಟಿಂಗ್ ಕೇಂದ್ರವನ್ನು ಸ್ಥಾಪಿಸಲಾಗಿದೆ. ತನ್ಮೂಲಕ, ಪರೀಕ್ಷಾ ಕೇಂದ್ರಗಳ ಮೇಲೆ ಜಿಲ್ಲಾಡಳಿತಗಳು ನಿರಂತರ ನಿಗಾ ವಹಿಸಲಿವೆ.

<><><>

ಕಲಬುರ್ಗಿ ಮತ್ತು ಧಾರವಾಡದ ಅಪರ ಆಯುಕ್ತರ ಕಚೇರಿಗಳಲ್ಲಿ ಮತ್ತು ರಾಜ್ಯ ಮಟ್ಟದಲ್ಲಿಯೂ, 'ವೆಬ್ ಕಾಸ್ಟಿಂಗ್ ಜಾಲಬಂಧ'ದ ಮೂಲಕ, ರಾಜ್ಯದ ಯಾವುದೇ ಪರೀಕ್ಷಾ ಕೇಂದ್ರವನ್ನು ವೀಕ್ಷಿಸುವ ಅವಕಾಶ ಹೊಂದಲಾಗಿದೆ.

<><><>

ಕಿತ್ತೂರು ಕರ್ನಾಟಕ ಶೈಕ್ಷಣಿಕ ವಲಯದ, 9 ಜಿಲ್ಲೆಗಳಿಂದ, ಒಟ್ಟು 2 ಲಕ್ಷದ 41 ಸಾವಿರದ 150 ವಿದ್ಯಾರ್ಥಿಗಳು 10ನೇ ತರಗತಿ ಪರೀಕ್ಷೆಗೆ ಹಾಜರಾಗಲಿದ್ದಾರೆ. ಶಾಲಾ ಶಿಕ್ಷಣ ಇಲಾಖೆಯ, ಕಿತ್ತೂರು ಕರ್ನಾಟಕ ಶೈಕ್ಷಣಿಕ ವಲಯದ, ಅಪರ ಆಯುಕ್ತರಾದ ಜಯಶ್ರೀ ಶಿಂತ್ರಿ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಅಪರ ಆಯುಕ್ತೆ ಜಯಶ್ರೀ ಶಿಂತ್ರಿ ಧ್ವನಿ 50 ಸೆಕೆಂದುಗಳು

<><><>

ಚಾಲುಕ್ಯ ಉತ್ಸವ, ಹತ್ತು ವರ್ಷಗಳ ಬಳಿಕ, ಈ ವರ್ಷಾಂತ್ಯಕ್ಕೆ ಮೂರು ದಿನಗಳ ಕಾಲ, ಬಾಗಲಕೋಟೆ ಜಿಲ್ಲೆಯ ಬಾದಾಮಿ ಸೇರಿದಂತೆ, ಒಟ್ಟು ಮೂರು ಐತಿಹಾಸಿಕ ಸ್ಥಳಗಳಲ್ಲಿ ನಡೆಯಲಿದೆ ಎಂದು, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ. ವಿಕಾಸಸೌಧದಲ್ಲಿ ನಡೆದ, ಬಾಗಲಕೋಟೆಯ ಜನಪ್ರತಿನಿಧಿಗಳ ಸಭೆ ಬಳಿಕ, ಅವರು ಮಾಹಿತಿ ನೀಡಿದರು. ರಾಷ್ಟ್ರದ ಗಮನ ಸೆಳೆಯುವಂತೆ, ಜನೋತ್ಸವವಾಗಿ ಅದ್ದೂರಿಯಿಂದ ಆಚರಿಸಲು, ನಿರ್ಧರಿಸಲಾಗಿದೆ. ಇಮ್ಮಡಿ ಪುಲಿಕೇಶಿ ಸ್ಮರಣೆಯ, ಚಾಲುಕ್ಯ ಉತ್ಸವಕ್ಕೆ, ಬಾದಾಮಿಯಲ್ಲಿ ಮುಖ್ಯಮಂತ್ರಿಗಳು ಚಾಲನೆ ನೀಡಲಿದ್ದಾರೆ. ಎರಡನೇ ದಿನ ಪಟ್ಟದಕಲ್ಲು ಹಾಗೂ ಸಮಾರೋಪ ಸಮಾರಂಭ ಐಹೊಳೆಯಲ್ಲಿ ನಡೆಯಲಿದೆ ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳ, ಹಿಂಗಾರು ಹಂಗಾಮಿನ ಬೆಳೆಗಳಿಗೆ, ತುಂಗಭದ್ರಾ ಜಲಾಶಯದ ಎಡ ಹಾಗೂ ಬಲ ದಂಡೆಯ, ಕೆಳ ಮಟ್ಟದ ಕಾಲುವೆಗಳ ಮೂಲಕ, ನೀರೊದಗಿಸಲು ನಾಡಿದ್ದು 21 ರಂದು, ಬೆಂಗಳೂರಿನ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, 123ನೇ ತುಂಗಭದ್ರಾ ನೀರಾವರಿ ಸಲಹಾ ಸಮಿತಿಯ ತುರ್ತು ಸಭೆ ನಡೆಯಲಿದೆ. ಸಂಜೆ 4 ಗಂಟೆಗೆ ಆಯೋಜಿತ ಸಭೆಯಲ್ಲಿ, ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ.ಶಿವಕುಮಾರ, ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಹಾಗೂ ಸಂಬಂಧಿತ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದು, ತುಂಗಾಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿಯ, ಸದಸ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

<><><>

ಸರ್ವೋಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆ, ಪೆನ್ನಾರ್ ನದಿ ನೀರು ಹಂಚಿಕೆ ವಿಚಾರವಾಗಿ, ಕೇಂದ್ರ ಜಲಶಕ್ತಿ ಸಚಿವಾಲಯ, ಹೊಸ ದಿಲ್ಲಿಯಲ್ಲಿ ನಿನ್ನೆ ಆಯೋಜಿಸಿದ್ದ ಮಧ್ಯಸ್ಥಿಕೆ ಸಭೆಗೆ, ತಮಿಳುನಾಡು ಸಚಿವರು ಗೈರಾಗಿದ್ದು, ಸಭೆ ರದ್ದು ಪಡಿಸಲಾಯಿತು ಎಂದು, ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ. ಶಿವಕುಮಾರ, ಹೊಸ ದಿಲ್ಲಿಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.

<><><>

ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ – ಕಾಡಾ, ತಾಂತ್ರಿಕ, ಸಹಕಾರ ಹಾಗೂ ರೈತ ಸಂಪರ್ಕ, ಎಂಬ ಮೂರು ಹಂತಗಳಲ್ಲಿ ಕೆಲಸ ಮಾಡುತ್ತಿದೆ. ಕಾಡಾ ವ್ಯಾಪ್ತಿಯಲ್ಲಿ, ಒಟ್ಟು 537 ಸಂಘಗಳಿದ್ದು, 120 ಸಕ್ರಿಯವಾಗಿವೆ ಎಂದು, ಕಾಡಾ ಅಧ್ಯಕ್ಷ ಕೆ.ಪಿ.ಅಂಶುಮಂತ್ ತಿಳಿಸಿದ್ದಾರೆ. ಶಿವಮೊಗ್ಗದ, ಮಲವಗಗೊಪ್ಪದ ಕಾಡಾ ಕಚೇರಿಯಲ್ಲಿ, ನೀರು ಬಳಕೆದಾರರ ಸಂಘಗಳಿಗೆ ಏರ್ಪಡಿಸಲಾಗಿದ್ದ, ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಕಾಡಾ, ನೀರು ಬಳಕೆದಾರರ ಸಂಘಗಳ ಬಲವರ್ಧನೆ ಮಾಡುತ್ತಿದೆ. ಸ್ವಾಯತ್ತ ಸರ್ಕಾರದ ರೀತಿ, ಸಂಘಗಳು ಜವಾಬ್ದಾರಿಯಿಂದ ಕೆಲಸ ಮಾಡುತ್ತಿವೆ. ಭೂಮಿಯ ಆರೋಗ್ಯ ಕಾಪಾಡಲು, ನರೇಗಾ ಮತ್ತು ಕಾಡಾ ಸಹಯೋಗದಲ್ಲಿ, ಸವುಳು ಜವುಳು ತಡೆ ಕುರಿತು, ರಾಜ್ಯದ 10

ತಾಲೂಕುಗಳ ಮುಂಚೂಣಿ ಸಂಘಗಳನ್ನು ಗುರುತಿಸಿ, ಅನುದಾನ ವಿತರಿಸಲಾಗುತ್ತಿದೆ; ತುಮಕೂರು ಮತ್ತು ಚಿತ್ರದುರ್ಗದ ಕಾಡಾ ಘಟಕಗಳಲ್ಲಿ, 2 ಲಕ್ಷ 25 ಸಾವಿರ ಹೆಕ್ಟರ್ ಪ್ರದೇಶದಲ್ಲಿ, ಸಣ್ಣ ನೀರಾವರಿ ವ್ಯವಸ್ಥೆ ರೂಪಿಸಲು, ಯೋಜನೆ ರೂಪಿಸಲಾಗಿದೆ ಎಂದರು.

<><><>

ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಿಸಿಲು ಏರು ಗತಿಯಲ್ಲಿದ್ದು, ಝಳ ಮತ್ತು ಬೇಗುದಿ ಹೆಚ್ಚಿದ್ದು, ಜನ ಬಿಸಿ ಗಾಳಿ ಮತ್ತು ಬಿಸಿಲಾಘಾತದಿಂದ ಬಳಲುವ ಸಾಧ್ಯತೆ ಇದೆ. ತಾಪಮಾನ ಹೆಚ್ಚಿದ ಹಿನ್ನೆಲೆ, ಇಂದು ಮತ್ತು ನಾಳೆ ಉಷ್ಣ ಗಾಳಿಯಿಂದ ಮುಂಜಾಗ್ರತೆ ವಹಿಸುವಂತೆ, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. 'ಯೆಲ್ಲೋ ಅಲರ್ಟ್' ಪ್ರಕಟಿಸಿದ ಕಾರಣ, ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್, ಕೈಗೊಂಡ ಸಿದ್ಧತೆಗಳ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಧ್ವನಿ 45 ಸೆಕೆಂದುಗಳು

<><><>

ನಿಧನ ವಾರ್ತೆ

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಪ್ರಥಮ ಉಪ ಕುಲಪತಿಗಳಾಗಿದ್ದ, ಅಂತಾರಾಷ್ಟ್ರೀಯ ಖ್ಯಾತಿಯ, ಸಸ್ಯ ತಳಿ ವಿಜ್ಞಾನಿ, ಪ್ರೊಫೆಸರ್ ಜೆ.ವಿ. ಗೌಡ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಮಧ್ಯಾಹ್ನ 2.30ಕ್ಕೆ ಧಾರವಾಡದ ಹೊಸ ಬಸ್ ನಿಲ್ದಾಣ ಪಕ್ಕದ ರುದ್ರ ಭೂಮಿಯಲ್ಲಿ ಜರುಗಲಿದೆ. ಅದಕ್ಕೂ ಮುನ್ನ, ಬೆಳಗ್ಗೆ 11 ಗಂಟೆಯಿಂದ 1 ಗಂಟೆಯ ವರೆಗೆ, ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ, ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಬಳ್ಳಾರಿ ಜಿಲ್ಲೆ, ಸಂಡೂರು ತಾಲೂಕು, ಜಿಗೇನಹಳ್ಳಿಯಲ್ಲಿ ಜನಿಸಿದ್ದ ಡಾಕ್ಟರ್ ಗೌಡ, ಭಾರತ ರತ್ನ ಪ್ರೊಫೆಸರ್ ಎಂ.ಎಸ್. ಸ್ವಾಮಿನಾಥನ್ ಅವರ ಮಾರ್ಗದರ್ಶನದಲ್ಲಿ, ಐ.ಸಿ.ಎ.ಆರ್. ಫೆಲೋಶಿಪ್‌ನೊಂದಿಗೆ ಪಿ.ಎಚ್‌ಡಿ ಹಾಗೂ ಪೋಸ್ಟ್ ಡಾಕ್ಟರೇಟ್ ಪದವಿ ಪಡೆದ, ಶ್ರೇಷ್ಠ ಕೃಷಿ ವಿಜ್ಞಾನಿ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ, ಅನೇಕ ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ಬೀದರ ವ್ಯಾಪ್ತಿಯ, ಭಾಲ್ಕಿ ಮತ್ತು ಕಮಲನಗರ ರೇಲ್ವೆ ನಿಲ್ದಾಣಗಳನ್ನು, 'ಅಮೃತ ಭಾರತ ಯೋಜನೆಯಡಿ' ಸೇರ್ಪಡೆಗೊಳಿಸಿ, ಅಭಿವೃದ್ಧಿ ಪಡಿಸುವಂತೆ, ಸಂಸದ ಸಾಗರ ಖಂಡ್ರೆ, ಲೋಕಸಭೆಯಲ್ಲಿ ರೇಲ್ವೆ ಸಚಿವರಿಗೆ ಮನವಿ ಮಾಡಿದ್ದಾರೆ. ರೇಲ್ವೆ ಅಪಘಾತಗಳ ತಡೆಗೆ ಜಾರಿಗೊಂಡ, 'ಕವಚ' ತಂತ್ರಜ್ಞಾನ ದೇಶದ ಎಲ್ಲೆಡೆ, ಆದಷ್ಟು ಶೀಘ್ರ ಅಳವಡಿಸುವಂತೆ ಹಾಗೂ ಹಲವು ರೈಲುಗಳನ್ನು ಬೀದರ್ ವರೆಗೆ ವಿಸ್ತರಿಸುವಂತೆ ಅವರು ಕೋರಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

'ಜಿ. ಎಸ್. ಆಮೂರರ ಮೇರು ವಿಮರ್ಶಾ ಕೃತಿಗಳು' ಕುರಿತ ವಿಚಾರ ಸಂಕಿರಣ, ಇಂದು ಬೆಳಗ್ಗೆ 10.30ಕ್ಕೆ, ಗದಗನ ಜಗದ್ಗುರು ತೋಂಟದಾರ್ಯ ಮಹಾವಿದ್ಯಾಲಯದ ಸಭಾಂಗಣದಲ್ಲಿ ಜರುಗಲಿದೆ.

<><><>